MAY 01, 2026

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ರಾಷ್ಟ್ರೀಯ ಶಿಕ್ಷಣ ನೀತಿ–2020ರ ಮೂಲಕ** ವಿಶ್ವವಿದ್ಯಾಲಯಗಳು ಮೂಲ ಚಿಂತನೆ, ಬಹುಶಿಸ್ತೀಯ ಕಲಿಕೆ ಹಾಗೂ ನೈಜ–ಜಗತ್ತಿನ ಸಾಮರ್ಥ್ಯವನ್ನು ಪ್ರೋತ್ಸಾಹಿಸುತ್ತಿದ್ದು, ದೇಶದ ಭವಿ ್ಯವನ್ನು ರೂಪಿಸಲಿವೆ ಎಂದು ಕೇಂದ್ರ ಶಿಕ್ಷಣ ಖಾತೆ ಸಚಿವ ಧರ್ಮೇಂದ್ರ ಪ್ರಧಾನ ಹೇಳಿದರು. ಬೆಂಗಳೂರು ಚಾಣಕ್ಯ ವಿಶ್ವವಿದ್ಯಾಲಯದ ಡಾಕ್ಟರ ಕೆ.ಕಸ್ತೂರಿ ರಂಗನ್ ಸಭಾಂಗಣ, ಸ್ಯಾಟಲೈಟ್ ಗ್ರೌಂಡ್ ಸ್ಟೇಶನ್ ಅನ್ನು, ಇಸ್ರೋದ ಮಾಜಿ ಅಧ್ಯಕ್ಷ ಹಾಗೂ ವಿಶ್ವವಿದ್ಯಾಲಯದ ಕುಲಾಧಿಪತಿ ಡಾಕ್ಟರ ಎಸ್. ಸೋಮನಾಥ್ ಅವರ ಸಮ್ಮುಖದಲ್ಲಿ ಉದ್ಘಾಟಿಸಿ ಮಾತನಾಡಿದರು. ವಿಶ್ವವಿದ್ಯಾಲಯಗಳು ಕೇವಲ ಬೋಧನಾ ಕೇಂದ್ರಗಳಲ್ಲ, ಅವು ರಾಷ್ಟ್ರದ ಏಳಿಗೆಯ ಉದ್ದೇಶದೊಂದಿಗೆ ಮಾನವ ಕೌಶಲ ಸಾಮರ್ಥ್ಯವನ್ನು ಹೆಚ್ಚಿಸುವ ಹಾಗೂ ಯುವ ಮನಸ್ಸುಗಳನ್ನು ಜ್ಞಾನ ಮತ್ತು ಚಾರಿತ್ರ್ಯದೊಂದಿಗೆ ಮುನ್ನಡೆಸುವ ಕೇಂದ್ರಗಳು ಎಂದು ಸಚಿವ ಧರ್ಮೇಂದ್ರ ಪ್ರಧಾನ ಹೇಳಿದರು.

<><><>

**ಬೆಂಗಳೂರು ಗ್ರಾಮಾಂತರ ಜಿಲ್ಲೆ,** ದೇವನಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಅರ್ಹ ಫಲಾನುಭವಿಗಳಿಗೆ ನಿವೇಶನ ಹಂಚಿಕೆ ಮಾಡುವ ಸಂಬಂಧ, ಇದೇ 15 ರೊಳಗೆ ಎರಡು ಸಾವಿರ ನಿವೇಶನ ಸಿದ್ಧಪಡಿಸಲು ಅಧಿಕಾರಿಗಳು ತ್ವರಿತವಾಗಿ ಕಾರ್ಯೋನ್ಮುಖರಾಗಬೇಕಿದೆ ಎಂದು ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಖಾತೆ ಸಚಿವ ಕೆ.ಹೆಚ್ ಮುನಿಯಪ್ಪ ಸೂಚಿಸಿದ್ದಾರೆ.

<><><>

**ಇಂದು ಬುದ್ಧ ಪೂರ್ಣಿಮೆ;** ನಾಡಿನ ಜನತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ ಸೇರಿದಂತೆ ಗಣ್ಯರು ಶುಭಾಶಯಗಳನ್ನು ಕೋರಿದ್ದಾರೆ. ಬೆಂಗಳೂರು ಸದಾಶಿವನಗರದ, ನಾಗಸೇನ ಬುದ್ಧವಿಹಾರ ಮೈದಾನದಲ್ಲಿ ಭಗವಾನ್ ಬುದ್ಧ ಜಯಂತಿ ಕಾರ್ಯಕ್ರಮ ಆರಂಭಗೊಂಡಿದೆ. ಧಾರವಾಡ ನಗರದ, ಕಲಾಭವನ ಕಡಪ ಮೈದಾನದಲ್ಲಿ ಬುದ್ಧ ಜಯಂತಿ ಕಾರ್ಯಕ್ರಮ ಆಯೋಜಿಸಲಾಗಿದೆ.

<><><>

**ಬುದ್ಧ ಪೂರ್ಣಿಮೆಯ ಹಿನ್ನೆಲೆ, ಧಾರವಾಡ ನಗರದ ಬುದ್ಧಿಸ್ಟ್ ಪಾಲಿ** ಎಜುಕೇಶನ್ ರಿಸರ್ಚ್ ಟ್ರಸ್ಟ್ ಅಧ್ಯಕ್ಷ, ಪಬ್ಬಜ್ಜೊ ರವಿತಿ ಪಾಲಿ ವಿಜ್ಜಾ ಮುನಿಯೋ, ಪ್ರದೇಶ ಸಮಾಚಾರಕ್ಕಾಗಿ ಬುದ್ಧ ಜಯಂತಿಯ ಸಂದೇಶ ನೀಡಿದ್ದಾರೆ.

<><><>

**ಪಬ್ಬಜ್ಜೊ ರವಿತಿ ಪಾಲಿ ವಿಜ್ಜಾ ಮುನಿಯೊ ಧ್ವನಿ– 45 ಸೆಕೆಂದುಗಳು**

<><><>

**ಅಂತಾರಾಷ್ಟ್ರೀಯ ಕಾರ್ಮಿಕ ದಿನದ** ಹಿನ್ನೆಲೆ, ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ, ತಮ್ಮ ಎಕ್ಸ್ ಖಾತೆಯ ಎಲ್ಲ ಶ್ರಮಜೀವಿಗಳಿಗೆ ಗೌರವಪೂರ್ವಕ ನಮನಗಳನ್ನು ಸಲ್ಲಿಸಿದ್ದಾರೆ. ದೇಶದ ಪ್ರಗತಿಗೆ, ಕುಟುಂಬದ ಏಳಿಗೆಗೆ ದುಡಿಯುವ ಸಮಸ್ತ ಕಾರ್ಮಿಕ ವರ್ಗಕ್ಕೆ ಶುಭಾಶಯಗಳನ್ನು ಕೋರಿದ್ದಾರೆ.

<><><>

**ಕಾರ್ಮಿಕ ಖಾತೆ ಸಚಿವ** ಸಂತೋಷ್ ಲಾಡ್, ತಮ್ಮ ಸಾಮಾಜಿಕ ಜಾಲತಾಣದ ಮೂಲಕ, ಕಾರ್ಮಿಕ ದಿನಾಚರಣೆ ಶುಭಾಶಯಗಳನ್ನು ತಿಳಿಸಿದ್ದಾರೆ. ರಾಜ್ಯ ಸರ್ಕಾರ ಕಾರ್ಮಿಕ ಸಮುದಾಯದ ಕಲ್ಯಾಣಕ್ಕಾಗಿ ಸಾಕಷ್ಟು ಯೋಜನೆಗಳನ್ನು ರೂಪಿಸಿದೆ. ಶ್ರಮಿಕರ ಅಭ್ಯುದಯವೇ, ಸರ್ಕಾರದ ಧ್ಯೇಯ ಎಂದಿದ್ದಾರೆ.

<><><>

**ಸರ್ವೋಚ್ಛ ನ್ಯಾಯಾಲಯವು, ರಾಷ್ಟ್ರಾದ್ಯಂತ** ಮಧ್ಯಸ್ಥಿಕೆ ಆಧಾರಿತ ತೀರ್ಪು ಹಾಗೂ ವಿವಾದಗಳ ಸೌಹಾರ್ದಪೂರ್ಣ ಸಮನ್ವಯಕ್ಕಾಗಿ, ವಿಶೇಷ ಲೋಕ ಅದಾಲತ್–ಸಮಾಧಾನ ಸಮಾರೋಹವನ್ನು ಆಯೋಜನೆ ಮಾಡುತ್ತಿದೆ ಎಂದು ಹುಬ್ಬಳ್ಳಿ ತಾಲೂಕು ಕಾನೂನು ಸೇವಾ ಸಮಿತಿ ಅಧ್ಯಕ್ಷರು ಹಾಗೂ ಕೌಟುಂಬಿಕ ನ್ಯಾಯಾಲಯದ ಪ್ರಧಾನ ನ್ಯಾಯಾಧೀಶರಾದ ವೀಣಾ ನಾಯ್ಕರ  ಹೇಳಿದ್ದಾರೆ. ಸರ್ವೋಚ್ಚ ನ್ಯಾಯಾಲಯದಲ್ಲಿ, ಧಾರವಾಡ ಜಿಲ್ಲೆಯ 188 ಪ್ರಕರಣಗಳು ಬಾಕಿಯಿದ್ದು, ಆಗಸ್ಟ್ 21, 22 ಹಾಗೂ 23 ರಂದು ಸಮಾಧಾನ ಸಮಾರೋಹ ವಿಶೇ ' ಲೋಕ ಅದಾಲತ್ ನಡೆಸಲಾಗುವುದು ಎಂದು ಅವರು ತಿಳಿಸಿದ್ದಾರೆ.

<><><>

**ರಾಜ್ಯ ಸರ್ಕಾರದ ನೋಂದಣಿ** ಮತ್ತು ಮುದ್ರಾಂಕ ಇಲಾಖೆ, ಕಾವೇರಿ 2.0 ಪೋರ್ಟಲ್ ಮೂಲಕ, ರಾಜ್ಯದಲ್ಲೇ ಮೊದಲ ಬಾರಿಗೆ, ಕಾಗದ ರಹಿತ ನೋಂದಣಿ ಪ್ರಕ್ರಿಯೆಗೆ ಚಾಮರಾಜನಗರದ ಉಪನೋಂದಣಿ ಕಚೇರಿಯಲ್ಲಿ ಚಾಲನೆ ನೀಡಲಾಗಿದೆ. ನೋಂದಣಿ ಮತ್ತು ಮುದ್ರಾಂಕ ಇಲಾಖೆ, ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರಾದ ಎಂ.ಪಿ. ಮುಲೈ ಮುಹಿಲನ್, ಕಾಗದ ರಹಿತ ನೋಂದಣಿ ಪ್ರಕ್ರಿಯೆಗೆ ಕಂಪ್ಯೂಟರ್ ಬಟನ್ ಒತ್ತುವ ಮೂಲಕ ಚಾಲನೆ ನೀಡಿದರು.  ಈ ಸಂದರ್ಭ ಮಾತನಾಡಿದ ಅವರು, ನೂತನ ಕಾಗದ ರಹಿತ ನೋಂದಣಿ ವ್ಯವಸ್ಥೆಯು ನಾಗರಿಕ ಕೇಂದ್ರಿತ, ಪಾರದರ್ಶಕ ಹಾಗೂ ಪರಿಣಾಮಕಾರಿ ನೋಂದಣಿ ಸೇವೆಗಳನ್ನು ಒದಗಿಸುವಲ್ಲಿ ಮಹತ್ವದ ಮೈಲಿಗಲ್ಲಾಗಿದೆ. ನೂತನ ಡಿಜಿಟಲ್ ವ್ಯವಸ್ಥೆ, ಆಸ್ತಿ ವ್ಯವಹಾರಗಳ ನಿರ್ವಹಣೆಯಲ್ಲಿ ಮಹತ್ವದ ಪಾತ್ರ ವಹಿಸಲಿದ್ದು,  ವಿಶ್ವಾಸಾರ್ಹತೆ ಹೆಚ್ಚಿಸಲಿದೆ ಎಂದರು.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ**

<><><>